# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **801** |
| ಉತ್ತರಿಸಬೇಕಾದ ದಿನಾಂಕ | : | **20-09-2022** |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಸಂಘದ ಬ್ಯಾಂಕುಗಳಲ್ಲಿ (ಪ್ಯಾಕ್ಸ್) ಮತ್ತು ಡಿ.ಸಿ.ಸಿ ಬ್ಯಾಂಕುಗಳಲ್ಲಿ ಆರ್.ಟಿ.ಸಿ ಹೊಂದಿರುವ ರೈತರ ಚಿನ್ನಾಭರಣದ ಮೇಲಿನ ಸಾಲಕ್ಕೆ ನಿಗದಿಪಡಿಸಲಾಗಿರುವ ಬಡ್ಡಿದರವೆಷ್ಟು; | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಾಕ್ಸ್) ಮತ್ತು ಬ್ಯಾಂಕುಗಳು ತಮ್ಮ ಬಂಡವಾಳ ವೆಚ್ಚ, ಸಿಬ್ಬಂದಿ ವೆಚ್ಚ ಮತ್ತು ಮಾರ್ಜಿನನ್ನು ಆಧರಿಸಿ ಕೃಷಿಯೇತರ ಉದ್ದೇಶಗಳಿಗೆ ನೀಡುವ ಸಾಲಗಳಿಗೆ ಬಡ್ಡಿದರ ನಿಗಧಿಪಡಿಸುತ್ತವೆ.<br><br>ಸಹಕಾರ ಸಂಘದ ಬ್ಯಾಂಕುಗಳಲ್ಲಿ (ಪ್ಯಾಕ್ಸ್) ಮತ್ತು ಡಿ.ಸಿ.ಸಿ ಬ್ಯಾಂಕುಗಳಲ್ಲಿ ಆರ್.ಟಿ.ಸಿ ಹೊಂದಿರುವ ರೈತರ ಚಿನ್ನಾಭರಣದ ಮೇಲಿನ ಸಾಲಗಳು ಕೇಂದ್ರ ಸರ್ಕಾರದ ಕೆಸಿಸಿ ಸಾಲಗಳ ನಿಯಮಾವಳಿಗಳ ವ್ಯಾಪ್ತಿಗೆ ಬರುವುದಿಲ್ಲ. ಇವು ಕೃಷಿಯೇತರ ಸಾಲಗಳಾಗಿರುವುದರಿಂದ ಸರ್ಕಾರದಿಂದ ಕೃಷಿ ಸಾಲಗಳಿಗೆ ಜಾರಿಯಲ್ಲಿರುವ ರಿಯಾಯಿತಿ ಬಡ್ಡಿದರದ ವ್ಯಾಪ್ತಿಗೆ ತಂದು ಸರ್ಕಾರದ ಹಂತದಲ್ಲಿ ರಿಯಾಯಿತಿ ಬಡ್ಡಿದರಗಳನ್ನು ನಿಗಧಿಪಡಿಸಲು ಅವಕಾಶವಿರುವುದಿಲ್ಲ.<br><br>ಜಿಲ್ಲಾವಾರು ಡಿಸಿಸಿ ಬ್ಯಾಂಕ್ ಮತ್ತು ಪ್ಯಾಕ್ಸ್‌ವಾರು ನಿಗಧಿಪಡಿಸಿರುವ ಬಡ್ಡಿದರದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>RTC ಹೊಂದಿರುವ ರೈತರಿಗೆ ಚಿತ್ರದುರ್ಗ/ಕೊಡಗು/ತುಮಕೂರು ಡಿ.ಸಿ.ಸಿ. ಬ್ಯಾಂಕು ಶೇ.1.00ರಷ್ಟು ಸಾಮಾನ್ಯ ಬಡ್ಡಿ ದರದಲ್ಲಿ ರಿಯಾಯಿತಿಯನ್ನು ನೀಡುತ್ತಿವೆ. |

| | | |
|---|---|---|
| ಆ) | ಅವಶ್ಯಕತೆಗನುಗುಣವಾಗಿ ರೈತರಿಗೆ ಕೃಷಿ ಉದ್ದೇಶಕ್ಕಾಗಿ ರಿಯಾಯಿತಿ ಬಡ್ಡಿದರದಲ್ಲಿ ಚಿನ್ನಾಭರಣದ ಮೇಲಿನ ಸಾಲ ಮಂಜೂರು ಮಾಡಲು ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ರಾಜ್ಯದಲ್ಲಿರುವ 21 ಡಿ.ಸಿ.ಸಿ. ಬ್ಯಾಂಕುಗಳು ಹಾಗೂ ಪ್ಯಾಕ್ಸ್‌ಗಳು ರೈತರಿಗೆ ಹಣಕಾಸು ಸಂಪನ್ಮೂಲವನ್ನಾಧರಿಸಿ ಕನಿಷ್ಠ ರೂ.5.00ಲಕ್ಷಗಳಿಂದ ಗರಿಷ್ಠ ರೂ.40.00ಲಕ್ಷಗಳವರೆಗೆ ಚಿನ್ನಾಭರಣಗಳ ಮೇಲೆ ಸಾಲ ವಿತರಿಸಲಾಗುತ್ತಿದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ<br><br>ಸಹಕಾರ ಸಂಘ ಮತ್ತು ಬ್ಯಾಂಕುಗಳು ಚಿನ್ನವನ್ನು ಅಡವಿಟ್ಟುಕೊಳ್ಳದೆ FRUITS ತಂತ್ರಾಂಶದಲ್ಲಿ ಭೋಜಾ ದಾಖಲಿಸಿಕೊಂಡು (Mortgage) ತ್ವರಿತವಾಗಿ ಸ್ಕೇಲ್ ಆಫ್ ಫೈನಾನ್ಸ್ ಆಧರಿಸಿ ಕೃಷಿ ಸಾಲ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ರಿಯಾಯಿತಿ ಬಡ್ಡಿದರ ರೂ.3.00ಲಕ್ಷಗಳಿಗೆ ಮಾತ್ರ ಅನ್ವಯವಾಗುತ್ತದೆ. ಚಿನ್ನಾಭರಣದ ಮೇಲಿನ ಸಾಲಕ್ಕೆ ರಿಯಾಯಿತಿ ಬಡ್ಡಿದರ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | ಮೇಲ್ಕಂಡ ಬ್ಯಾಂಕುಗಳ ಬಡ್ಡಿದರವು ವಾಣಿಜ್ಯ ಬ್ಯಾಂಕುಗಳ ಬಡ್ಡಿದರಕ್ಕಿಂತ ಹೆಚ್ಚಿಗೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಡಿ.ಸಿ.ಸಿ. ಬ್ಯಾಂಕು ಮತ್ತು ಪ್ಯಾಕ್ಸ್‌ಗಳಲ್ಲಿ ನೀಡುವ ಚಿನ್ನಾಭರಣದ ಸಾಲದ ಬಡ್ಡಿದರವು ಸಹಕಾರ ಬ್ಯಾಂಕುಗಳ ಬಂಡವಾಳ ವೆಚ್ಚ, ಸಿಬ್ಬಂದಿ ವೆಚ್ಚ ಮತ್ತು ಮಾರ್ಜಿನನ್ನು ಆಧರಿಸಿ ನಿಗಧಿಪಡಿಸಲಾಗುತ್ತದೆ.<br><br>ಕೇಂದ್ರ ಸರ್ಕಾರದ ರಿಯಾಯಿತಿ ಬಡ್ಡಿದರದಲ್ಲಿ ಬೆಳೆಸಾಲ ನೀಡುವ ಯೋಜನೆಯಲ್ಲಿ ಸಹಕಾರ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ಒಂದೇ ಮಾನದಂಡ ಇದ್ದು, ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ಮಾತ್ರ ರಿಯಾಯಿತಿ ಬಡ್ಡಿದರ ಅನ್ವಯವಾಗುತ್ತದೆ. ಇದಕ್ಕಾಗಿ ಚಿನ್ನಾಭರಣ ಅಡವಿಡುವ ಅವಶ್ಯಕತೆ ಇಲ್ಲ.<br><br>ಆರ್‌ಬಿಐ ನಿಯಮಾವಳಿಗಳನ್ವಯ ರೂ.1.60 ಲಕ್ಷಗಳವರೆಗಿನ ಸಾಲಗಳಿಗೆ ಯಾವುದೇ ಕೊಲ್ಯಾಟರಲ್ ಭದ್ರತೆ ಪಡೆಯುವ ಅವಶ್ಯಕತೆಯಿರುವುದಿಲ್ಲ. ರೂ.1.60 ಲಕ್ಷಗಳಿಗಿಂತ ಹೆಚ್ಚಿನ ಸಾಲಗಳಿಗೆ ವಾಣಿಜ್ಯ ಬ್ಯಾಂಕುಗಳು ಚಿನ್ನಾಭರಣ ಅಡವಿಟ್ಟುಕೊಂಡು ಸಾಲ ನೀಡುತ್ತಿರುವುದು ಕಂಡುಬಂದಿರುತ್ತದೆ. ಸಹಕಾರ ಸಂಘ ಮತ್ತು ಬ್ಯಾಂಕುಗಳು ಚಿನ್ನವನ್ನು ಅಡವಿಟ್ಟುಕೊಳ್ಳದೆ ಫ್ರೂಟ್ ತಂತ್ರಾಂಶದಲ್ಲಿ ತ್ವರಿತವಾಗಿ ಭೋಜಾ ದಾಖಲಿಸಿಕೊಂಡು (Mortgage) ಸ್ಕೇಲ್ ಆಫ್ ಫೈನಾನ್ಸ್ ಆಧರಿಸಿ ಸಾಲ ನೀಡುತ್ತಿವೆ. |
| ಈ) | ವಾಣಿಜ್ಯ ಬ್ಯಾಂಕುಗಳು ನೀಡುವಂತೆ ಸಹಕಾರ ಬ್ಯಾಂಕುಗಳಲ್ಲೂ ರಿಯಾಯತಿ ಬಡ್ಡಿದರದಲ್ಲಿ ಸಾಲವನ್ನು ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು; | ಕೇಂದ್ರ ಸರ್ಕಾರದ ರಿಯಾಯಿತಿ ಬಡ್ಡಿದರದಲ್ಲಿ ಬೆಳೆಸಾಲ ನೀಡುವ ಯೋಜನೆಯಲ್ಲಿ ಸಹಕಾರ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ಒಂದೇ ಮಾನದಂಡ ಇದ್ದು, ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ಮಾತ್ರ ರಿಯಾಯಿತಿ ಬಡ್ಡಿದರ ಅನ್ವಯವಾಗುತ್ತದೆ. |

| | | |
|---|---|---|
| | | ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳು ನಿಗಧಿಪಡಿಸುವ ಬಡ್ಡಿದರವು ಆಯಾ ಬ್ಯಾಂಕಿನ ಕಾಸ್ಟ್ ಆಫ್ ಫಂಡ್ಸ್ ಮತ್ತು ಮಾರ್ಜಿನನ್ನು ಆಧರಿಸಿರುತ್ತದೆ. ರಾಜ್ಯ ಸರ್ಕಾರವು ಈಗಾಗಲೇ ರೂ.3.00ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲಕ್ಕೆ ಶೇ.0%ರಷ್ಟು ರೂ.10.00ಲಕ್ಷವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಕ್ಕೆ ಶೇ.3.00ರ ರಿಯಾಯಿತಿ ಬಡ್ಡಿದರದಲ್ಲಿ ಸಾಲ ನೀಡುತ್ತಿದ್ದು, ಚಿನ್ನಾಭರಣ ಸಾಲಗಳಿಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲವನ್ನು ನೀಡುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ. |
| ಉ) | ಯಾವ ಯಾವ ಕಾಲ ಮಿತಿಯಲ್ಲಿ ಯಾವ ಪ್ರಮಾಣದಲ್ಲಿ ಚಿನ್ನಾಭರಣದ ಮೇಲೆ ರಿಯಾಯತಿ ಬಡ್ಡಿದರವನ್ನು ನೀಡಲಾಗುವುದು; | ರೂ.3.00 ಲಕ್ಷಗಳವರೆಗಿನ ಅಲ್ಪಾವಧಿ ಸಾಲಗಳಿಗೆ ಶೂನ್ಯ ಬಡ್ಡಿದರ ಈಗಾಗಲೇ ಅನ್ವಯವಾಗುತ್ತಿದ್ದು ಇದಕ್ಕೆ ಚಿನ್ನಾಭರಣ ಭದ್ರತೆಯನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲ.<br><br>ಕೊಡಗು ಜಿಲ್ಲೆಯಲ್ಲಿ ಚಿನ್ನಾಭರಣ ಸಾಲಕ್ಕೆ ಕನಿಷ್ಠ 7% ಬಡ್ಡಿದರ ಮತ್ತು ಧಾರವಾಡ ಡಿ.ಸಿ.ಸಿ. ಬ್ಯಾಂಕು–7.5% ಬಡ್ಡಿದರ ನಿಗಧಿ ಪಡಿಸಿದ್ದು, ಬಾಗಲಕೋಟೆ/ತುಮಕೂರು ಡಿ.ಸಿ.ಸಿ. ಬ್ಯಾಂಕ್‌ಗಳು ಗರಿಷ್ಠ–12% ಬಡ್ಡಿದರ ನಿಗಧಿ ಪಡಿಸಿವೆ.<br><br>ಚಿತ್ರದುರ್ಗ, ಕೊಡಗು, ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅವರ ಹಂತದಲ್ಲಿಯೇ ತೀರ್ಮಾನ ಕೈಗೊಂಡು ಆರ್.ಟಿ.ಸಿ. ನೀಡಿ ಪಡೆದ ಚಿನ್ನಾಭರಣ ಸಾಲಕ್ಕೆ ಶೇ.1.00ರ ಬಡ್ಡಿ ರಿಯಾಯಿತಿ ನೀಡುತ್ತಿವೆ. ಚಿನ್ನಾಭರಣ ಸಾಲಗಳಿಗೆ ರಿಯಾಯಿತಿ ಬಡ್ಡಿದರ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ಸಿಒ 331 ಸಿಎಲ್‌ಎಸ್ 2022**

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:801 ಕ್ಕೆ (ಅನುಬಂಧ-1)

ಚಿನ್ನಾಭರಣ ಸಾಲದ ಮೇಲಿನ ಬಡ್ಡಿದರ(%)

| ಕ್ರಸಂ. | ಜಿಲ್ಲೆ | ಪ್ಯಾಕ್ಸ್ (ಸಾಮಾನ್ಯ ಸದಸ್ಯರಿಗೆ) | ಡಿಸಿಸಿ ಬ್ಯಾಂಕ್ (ಸಾಮಾನ್ಯ ಸದಸ್ಯರಿಗೆ) |
|---|---|---|---|
| 1 | ಬೆಳಗಾವಿ | 10–14 | 8.50–9 |
| 2 | ವಿಜಯಪುರ | 10–12 | 9.50 |
| 3 | ಬಾಗಲಕೋಟೆ | 11–12 | 12 |
| 4 | ಧಾರವಾಡ | 9–12 | 7.50 |
| 5 | ಗದಗ | 9–12 | 7.50 |
| 6 | ಹಾವೇರಿ | 9–12 | 7.50 |
| 7 | ಉತ್ತರ ಕನ್ನಡ | 10–13 | 9 |
| 8 | ಬಳ್ಳಾರಿ | 10–14 | 8–9 |
| 9 | ಬೀದರ್ | – | 8.50 |
| 10 | ಕಲಬುರಗಿ | 15 | 12 |
| 11 | ಯಾದಗಿರಿ | 15. | 12 |
| 12 | ರಾಯಚೂರು | – | 10–10.50 |
| 13 | ಕೊಪ್ಪಳ | – | 10–10.50 |
| 14 | ಮೈಸೂರು | 10–13 | 9 |
| 15 | ಚಾಮರಾಜ ನಗರ | 10–12 | 9 |
| 16 | ಮಂಡ್ಯ | – | 9 |
| 17 | ಹಾಸನ | 9–14 | 9 |
| 18 | ಚಿಕ್ಕಮಗಳೂರು | 8–14 | 9 |
| 19 | ಕೊಡಗು | 8.10 | 8 |
| 20 | ದಕ್ಷಿಣ ಕನ್ನಡ | 9–12 | 8.40 |
| 21 | ಉಡುಪಿ | 9–12 | 8.40 |
| 22 | ಬೆಂಗಳೂರು ನಗರ | 8.50–12 | 10 |
| 23 | ಬೆಂಗಳೂರು ಗ್ರಾಮಾಂತರ | 10–11.50 | 10 |
| 24 | ರಾಮನಗರ | 12 | 10 |
| 25 | ತುಮಕೂರು | 14 | 12 |
| 26 | ಚಿತ್ರದುರ್ಗ | 12 | 10 |
| 27 | ದಾವಣಗೆರೆ | 10–12 | 9.25 |
| 28 | ಚಿಕ್ಕ ಬಳ್ಳಾಪುರ | 12 | 8.50 |
| 29 | ಕೋಲಾರ | 9–11.50 | 8.50 |
| 30 | ಶಿವಮೊಗ್ಗ | 10–13 | 9.50–10 |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)